# ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಹಿರಿಯೂರು

## ಸಿ.ಸಿ ಸಂಖ್ಯೆ: 1096/2020

| | | |
|---|---|---|
| ಸಾಕ್ಷಿದಾರರ ಹೆಸರು | – ಜಿ.ಎಸ್. ಹೆಗಡೆ | ಸಿಡಬ್ಲ್ಯೂ-14 |
| ತಂದೆಯ/ಗಂಡನ ಹೆಸರು | – ಸೀತಾರಾಮ್ ಹೆಗಡೆ | ಪಿಡಬ್ಲ್ಯೂ-10 |
| ವಯಸ್ಸು | – ಸು.65 ವರ್ಷ | ಪ್ರ.ವ.ಬೋ ದಿನಾಂಕ:03.10.2025 |
| ಉದ್ಯೋಗ | – ನಿವೃತ್ತ ಪ್ರಾದೇಶಿಕ ಸಾರಿಗೆ ಅಧಿಕಾರಿ | |
| ವಾಸ | – ಶಿರಸಿ | |

**ಮುಖ್ಯ ವಿಚಾರಣೆ: ಮಾನ್ಯ ಎಪಿಪಿಯವರಿಂದ:-**

1. ನಾನು ಆಗಸ್ಟ್-2019 ರಿಂದ ಜುಲೈ-2021 ರವರೆಗೆ ಚಿತ್ರದುರ್ಗ ಪ್ರಾದೇಶಿಕ ಸಾರಿಗೆ ಕಛೇರಿಯಲ್ಲಿ ಪ್ರಾದೇಶಿಕ ಸಾರಿಗೆ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ಸಾಕ್ಷಿಯು ದಿನಾಂಕ:20.01.2020 ರ ಕರ್ತವ್ಯ ಧೃಢೀಕರಣ ಪತ್ರವನ್ನು ನೋಡಿ ಗುರುತಿಸಿದ್ದರಿಂದ ಸದರಿ ದಾಖಲೆಯನ್ನು **ನಿಪಿ-14** ಎಂದು, ಅದರಲ್ಲಿರುವ ಸಾಕ್ಷಿಯ ಎರಡು ಸಹಿಗಳನ್ನು **ನಿಪಿ-14(ಎ) ಮತ್ತು (ಬಿ)** ಎಂದು ಗುರುತಿಸಲಾಯಿತು.ಪೊಲೀಸ್ ವೃತ್ತ ನಿರೀಕ್ಷಕರು, ಹಿರಿಯೂರು ವೃತ್ತ ಇವರ ಮನವಿಯ ಮೇರೆಗೆ ದಿನಾಂಕ:20.05.2019 ರಿಂದ ದಿನಾಂಕ:26.05.2019 ರವರೆಗೆ ಚಾಸಾ-1 ಮತ್ತು ಮೃತ ಎಲ್. ಸುರೇಶ್‌ರವರ ಕರ್ತವ್ಯ ಧೃಢೀಕರಣ ಪತ್ರವನ್ನು ನಿಪಿ-14 ರಂತೆ ನೀಡಿರುತ್ತೇನೆ.

**ಪಾಟೀ-ಸವಾಲು: ಆರೋಪಿ ಪರ ಶ್ರೀ ಬಿ.ಎಲ್.ಎಸ್. ವಕೀಲರಿಂದ:-**

3. ಜಿಲ್ಲಾ ಗೃಹರಕ್ಷಕ ದಳ, ಚಿತ್ರದುರ್ಗ ಇವರ ಪತ್ರವನ್ನು ತನಿಖಾಧಿಕಾರಿಯ ಮುಂದೆ ಹಾಜರುಪಡಿಸಿರುತ್ತೇನೋ ಇಲ್ಲವೋ ನನಗೆ ಗೊತ್ತಿಲ್ಲ. ನಮ್ಮ ಕಛೇರಿಯ ಸಿಬ್ಬಂದಿಗಳು ಹಾಜರಾತಿ ಪುಸ್ತಕಕ್ಕೆ ಸಹಿ ಮಾಡುತ್ತಾರೆ. ಹಾಜರಾತಿ ಪುಸ್ತಕವನ್ನು ನೀಡಲು ನನಗೆ ತೊಂದರೆ ಇರಲಿಲ್ಲ ಎಂದರೆ ಸರಿ.

ನಿಪಿ–14 ರ ಪ್ರಕಾರ ಚಾಸಾ–1 ಮತ್ತು ಮೃತ ಎಲ್. ಸುರೇಶ್‌ರವರಿಗೆ ದಿನಾಂಕಃ20.05.2019 ಮತ್ತು ದಿನಾಂಕಃ25.05.2019 ರಂದು ಮೊಳಕಾಲ್ಮೂರು ಮತ್ತು ಹೊಳಲ್ಕೆರೆಯಲ್ಲಿ ಕ್ಯಾಂಪ್ ಕರ್ತವ್ಯಕ್ಕೆ ಹಾಕಿರುತ್ತೇನೆ ಎಂದರೆ ಸರಿ. ಅಪಘಾತ ನಡೆದ ಸ್ಥಳ ಹಿರಿಯೂರು ತಾಲೂಕಿಗೆ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ.

4. ದಿನಾಂಕಃ24.05.2019 ರಂದು ಚಾಸಾ–1 ಮತ್ತು ಸುರೇಶ್ ರವರು ಹಿರಿಯೂರು ಟೋಲ್ ಪ್ಲಾಜಾದ ಬಳಿ ಕರ್ತವ್ಯ ನಿರ್ವಹಿಸಿರುವ ಬಗ್ಗೆ ನಿಪಿ–14 ರಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ–14 ರಲ್ಲಿ ದಿನಾಂಕಃ24.05.2019 ರಂದು ಚಾಸಾ–1 ಮತ್ತು ಸುರೇಶ್ ರವರು ಹಿರಿಯೂರು ಟೋಲ್ ಪ್ಲಾಜಾದ ಬಳಿ ಕರ್ತವ್ಯ ನಿರ್ವಹಿಸಿರುವ ಬಗ್ಗೆ ನಮೂದಿಸಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹಿರಿಯೂರು ವೃತ್ತ ನಿರೀಕ್ಷಕರು ನನಗೆ ಯಾವುದೇ ಮನವಿ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ಧೃಢೀಕರಣ ಪತ್ರವನ್ನು ನೀಡಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸರಿ ಇದೆ

ಸಿ/ಸಿ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹಿರಿಯೂರು.